**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ :352/2019**
**ಚಾಸಾ :- 06 / ಪ್ರಾಸಾ :- 06**

| | |
|---|---|
| ಹೆಸರು | **ಸವಿತಾ ಕೆ. ಆರ್** |
| ಗಂಡನ ಹೆಸರು | **ವಿವೇಕನಂದಾ** |
| ವಯಸ್ಸು | **47** |
| ಉದ್ಯೋಗ | **ಅಡ್ಮಿನಿಸ್ಟ್ರೇಟರ್, ಸಿ. ಹೆಚ್. ಸಿ, ಕೆಂಗೇರಿ** |
| ವಿಳಾಸ | **ಬೆಂಗಳೂರು** |

**ದಿನಾಂಕ:28-06-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು ಜುಲೈ 2010 ನೇ ಇಸವಿಯಿಂದ 2020 ಮಾರ್ಚ್ ತಿಂಗಳಿನ ವರೆಗೆ ಸ್ತ್ರೀರೋಗ ತಜ್ಞರಾಗಿ ಮಾಗಡಿ ಸಾರ್ವಜನಿಕರ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿ.11-06-2017 ರಂದು ಬೆಳಗ್ಗೆ 11.45 ರ ಸಮಯದಲ್ಲಿ ಪ್ರಾಸಾ-1 ರವರು ಅವರಿಗೆ ದಿ.06-06-2017 ರಂದು ಯಾರೋ ಹಲ್ಲೆ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ಪ್ರಾಸಾ1 ರವರನ್ನು ಪರೀಕ್ಷಿಸಿದ ನಂತರ ಅವರ ಕತ್ತಿನ ಹಿಂಭಾಗದಲ್ಲಿ ಮೂಗೇಟು ಆಗಿರುತ್ತದೆ. ಅವರಿಗೆ ನಾನು ಚಿಕಿತ್ಸೆಯನ್ನು ನೀಡಿರುತ್ತೇನೆ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಈಗ ಸಾಕ್ಷಿಗೆ ಗಾಯದ ಪ್ರಮಾಣಪತ್ರವನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ಗಾಯದ ಪ್ರಮಾಣಪತ್ರ ವನ್ನು ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಕೈಗಳಿಂದ ಹೊಡೆದರೆ ಈ ಮೇಲೆ ಹೇಳಿರುವ ಗಾಯವು ಸಂಭವಿಸುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲು :-ಆರೋಪಿಗಳ ಪರ ಶ್ರೀ. ಎಂ. ಎನ್, ವಕೀಲರಿಂದ :-**

ಈಗ ಸಾಕ್ಷಿಗೆ ನಿಪಿ-3 ನ್ನು ತೋರಿಸಿದ್ದು, ಅದರಲ್ಲಿ ಯಾವ ಸಮಯದಲ್ಲಿ ಪ್ರಾಸಾ-1 ರವರಿಗೆ ಗಾಯ ಆಗಿದೆ ಎಂದು ನಮೂದಿಸಿರುವುದಿಲ್ಲ ಮತ್ತು ಗಾಯವು ಹಳೆಯದ ಅಥವಾ ಹೊಸದ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಮಾನ್ಯವಾಗಿ ಒರಟಾದ ಜಾಗದ ಮೇಲಿ ಬಿದ್ದಾಗ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಗಾಯವು ಸಂಭವಿಸುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರಾಸಾ-1 ರವರು ನಿಮ್ಮ ಬಳಿ ಬಂದು ಯಾವುದೇ ಚಿಕಿತ್ಸೆಯನ್ನು ಪಡೆದು ಕೊಳ್ಳದೇ ಇದ್ದರೂ ಸಹ ಪ್ರಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನೀವು ನಿಪಿ-3 ರಂತೆ ಸುಳ್ಳು ಗಾಯದ ಪ್ರಮಾಣಪತ್ರವನ್ನು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**